# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 988 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎಸ್.ನವೀನ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 22/02/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಾಯಿತರಾದ ಕಾರ್ಮಿಕರ ವಿವರ ಈ ಕೆಳಕಂಡಂತಿದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಈ ಮಂಡಳಿಯಲ್ಲಿ ಫಲಾನುಭವಿಗಳಾಗಿ 40.82 ಲಕ್ಷ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ನೋಂದಣಿಯಾಗಿರುತ್ತಾರೆ. ನೋಂದಣಿಯಾದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಈ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಣಿಯಾದ/ಕೋವಿಡ್-19ರ ಅಲೆಯಲ್ಲಿ ನೆರವು ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರ ವಿವರ ಈ ಕೆಳಕಂಡಂತಿದೆ ಮತ್ತು ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ – 2** ರಲ್ಲಿ ಒದಗಿಸಿದೆ. |

| ಕ್ರಸಂ | ಯೋಜನೆ/ಕಾರ್ಯಕ್ರಮ | ಕಾರ್ಮಿಕರ ಸಂಖ್ಯೆ |
|---|---|---|
| 01 | ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ | 8,40,561 (ಸಾರಿಗೆ ಇಲಾಖೆಯ ದತ್ತಾಂಶದ ಪ್ರಕಾರ) |
| 02 | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೊಜನೆ | 2,96,724 |
| 03 | ಕೋವಿಡ್-19ರ ವಿಶೇಷ ಪ್ಯಾಕೇಜ್ ರಡಿ ಅರ್ಜಿ ಸಲ್ಲಿಸಿದ ಕಾರ್ಮಿಕರು. | 14,52,943 |
| 04 | ಇ-ಶ್ರಮ್ ಕಾರ್ಯಕ್ರಮ (ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ ಸೇರಿದಂತೆ). | 80,18,436 |
| 05 | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | 2,141 |

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**

ಈ ಮಂಡಳಿಯಲ್ಲಿ ಸಂಘಟಿತ ಕಾರ್ಮಿಕರನ್ನು ನೊಂದಾಯಿಸುವ ಪದ್ಧತಿ ಇರುವುದಿಲ್ಲ. ಆದಾಗ್ಯೂ ಈ ಮಂಡಳಿಗೆ ವಂತಿಕೆ ಪಾವತಿ ಮಾಡುವ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-3,** ರಲ್ಲಿ ಒದಗಿಸಿದೆ.

ಆ) ಹೊರ ರಾಜ್ಯದಿಂದ ಬಂದು ನಮ್ಮ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ನೋಂದಣಿ ಪ್ರಕ್ರಿಯೆ ಮಾಡಲಾಗಿದೆಯೇ; ಅದೇ ರೀತಿ ನಮ್ಮ ರಾಜ್ಯದಿಂದ ಹೊರ ರಾಜ್ಯಗಳಿಗೆ ಹೋಗಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಹೊರ ರಾಜ್ಯದಿಂದ ಬಂದು ನಮ್ಮ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ನೋಂದಣಿಯ ಕುರಿತಂತೆ ಯಾವುದೇ ಪ್ರಕ್ರಿಯೆ ಇಲಾಖೆ ವತಿಯಿಂದ ನಡೆದಿರುವುದಿಲ್ಲ. ಆದರೆ ಅಂತರ ರಾಜ್ಯ ವಲಸೆ ಕಾರ್ಮಿಕ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತು) ಕಾಯ್ದೆ 1979 ರಡಿ ಮೂಲ ಮಾಲೀಕರ ನೋಂದಣಿ ಮತ್ತು ಸಂಬಂಧಿಸಿದ ಗುತ್ತಿಗೆದಾರರಿಗೆ ಲೈಸನ್ಸ್ ಅಥವಾ ಪರವಾನಿಗೆಯನ್ನು ನೀಡಲಾಗುತ್ತಿದ್ದು, ಸದರಿ ಮಾಲೀಕರ ನೋಂದಣಿ, ಗುತ್ತಿಗೆದಾರರ ಪರವಾನಿಗೆಗಳ ಆಧಾರದ ಮೇಲೆ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು, ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ಒದಗಿಸಿದೆ.

ಹೊರರಾಜ್ಯದಿಂದ ವಲಸೆ ಬಂದು ನಮ್ಮ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ವಿವರ;

| **ಕ್ರ. ಸಂ.** | **ನೋಂದಣಿಯಾದ ಮಾಲೀಕರ ಸಂಖ್ಯೆ** | **ಕಾರ್ಮಿಕರ ಸಂಖ್ಯೆ** | **ಪರವಾನಗಿ ಪಡೆದ ಗುತ್ತಿಗೆದಾರರ ಸಂಖ್ಯೆ** | **ಕಾರ್ಮಿಕರ ಸಂಖ್ಯೆ** | **ಒಟ್ಟು ಕಾರ್ಮಿಕರ ಸಂಖ್ಯೆ** |
|---|---|---|---|---|---|
| **1** | **355** | **38723** | **195** | **12563** | **46746** |

ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ** ಹೊರರಾಜ್ಯದಿಂದ ಬಂದು ನಮ್ಮ ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವ ಕಟ್ಟಡ ಕಾರ್ಮಿಕರು ಸಹ ನಿಯಮಾನುಸಾರ ಮಂಡಳಿಯ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆದರೆ ನೋಂದಣಿಯಾದ ಹೊರ ರಾಜ್ಯದ ವಲಸೆ ಕಾರ್ಮಿಕರ ಸಂಖ್ಯೆಯನ್ನು ಮಂಡಳಿಯು ಈ ಹಿಂದೆ ನಿರ್ವಹಿಸಿರುವುದಿಲ್ಲ. ಮಂಡಳಿಯ ನೂತನ ತಂತ್ರಾಂಶ ಜಾರಿಗೆ ಬಂದ ನಂತರ 1819 ಹೊರರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರು ಮಂಡಳಿಯಲ್ಲಿ ನೋಂದಣಿಯಾಗಿರುತ್ತಾರೆ.

ಮುಂದುವರೆದು, ನಮ್ಮ ರಾಜ್ಯದಿಂದ ಹೊರ ರಾಜ್ಯಗಳಿಗೆ ಹೋಗಿ ಕಾರ್ಯನಿರ್ವಹಿಸುತ್ತಿರುವ ಕಟ್ಟಡ ಕಾರ್ಮಿಕರ ವಿವರ/ಪಟ್ಟಿಯು ಮಂಡಳಿಯಲ್ಲಿ ಲಭ್ಯವಿರುವುದಿಲ್ಲ

**ಕಾಇ 128 ಎಲ್ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-1

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 988**

| ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಫಲಾನುಭವಿಗಳ ಜಿಲ್ಲಾವಾರು ವಿವರ | | |
|---|---|---|
| **ಕ್ರ ಸಂ** | **ಜಿಲ್ಲೆ** | **ಸಂಖ್ಯೆ** |
| 1 | ಬಾಗಲಕೋಟೆ | 143259 |
| 2 | ಬೆಂಗಳೂರು ಗ್ರಾಮಾಂತರ | 24153 |
| 3 | ಬೆಂಗಳೂರು ನಗರ | 427263 |
| 4 | ಬೆಳಗಾವಿ | 225377 |
| 5 | ಬಳ್ಳಾರಿ | 112164 |
| 6 | ಬೀದರ | 228398 |
| 7 | ವಿಜಯಪುರ | 135246 |
| 8 | ಚಾಮರಾಜನಗರ | 54772 |
| 9 | ಚಿಕ್ಕಬಳ್ಳಾಪುರ | 52752 |
| 10 | ಚಿಕ್ಕಮಗಳೂರು | 101582 |
| 11 | ಚಿತ್ರದುರ್ಗ | 133362 |
| 12 | ದಕ್ಷಿಣ ಕನ್ನಡ | 92272 |
| 13 | ದಾವಣಗೆರೆ | 164697 |
| 14 | ಧಾರವಾಡ | 169170 |
| 15 | ಗದಗ | 103374 |
| 16 | ಕಲಬುರಗಿ | 305949 |
| 17 | ಹಾಸನ | 89014 |
| 18 | ಹಾವೇರಿ | 275785 |
| 19 | ಕೊಡಗು | 8417 |
| 20 | ಕೋಲಾರ | 109532 |
| 21 | ಕೊಪ್ಪಳ | 209302 |
| 22 | ಮಂಡ್ಯ | 38757 |
| 23 | ಮೈಸೂರು | 153368 |
| 24 | ರಾಯಚೂರು | 83050 |
| 25 | ರಾಮನಗರ | 58225 |
| 26 | ಶಿವಮೊಗ್ಗ | 123188 |
| 27 | ತುಮಕೂರು | 115223 |
| 28 | ಉಡುಪಿ | 63195 |
| 29 | ಉತ್ತರ ಕನ್ನಡ | 152439 |
| 30 | ಯಾದಗಿರಿ | 129368 |
| | **ಒಟ್ಟು** | **4082653** |